**<u>ದಿಃ 23.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.ಎಸ್.ಎಫ್.ಡಬ್ಲೂ ವಕೀಲರಿಂದಃ 1 ನೇ ಪ್ರತಿವಾದಿಯ ಪರಃ</u>**

**13)** ನಾನು 4 ರಿಂದ 5 ನೇ ತರಗತಿಯವರೆಗೆ ಓದಿದ್ದೇನೆ. ಆಸ್ತಿಗಾಗಿ ದಾವೆ ದಾಖಲಿಸಿದ್ದೇನೆ. ಆಸ್ತಿಗಳ ಸಂಖ್ಯೆ ಗೊತ್ತಿಲ್ಲ. ಹಾವೇರಿ ಆಸ್ತಿಗೆ ಸಂಬಂಧಿಸಿದಂತೆ ದಾವೆ ಮಾಡಿದ್ದೇನೆ. ದಾವಾ ಆಸ್ತಿ 9 ಗುಂಟೆ ಇರುತ್ತದೆ. ದಾವಾ ಆಸ್ತಿಯ ಚೆಕ್‌ಬಂದಿ ನನಗೆ ಗೊತ್ತಿಲ್ಲ. 9 ಗುಂಟೆ ಆಸ್ತಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಖಾಸಿಂಸಾಬ, ತಾಯಿಯ ಹೆಸರು ಖೈರುನ್ನಬಿ. ನಮ್ಮ ತಂದೆ ತಾಯಿಗೆ 4 ಜನ ಹೆಣ್ಣುಮಕ್ಕಳು, 2 ಜನ ಗಂಡು ಮಕ್ಕಳು. ನನ್ನ ತಾಯಿ ಸೆಪ್ಟೆಂಬರ 14 ರಂದು ಮೃತಪಟ್ಟಿದ್ದಾರೆ, ವರ್ಷ ನೆನಪಿಲ್ಲ. ನನ್ನ ತಾಯಿ ಅನಾರೋಗ್ಯದಿಂದ ದಾವಣಗೆರೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

**14)** ನನ್ನ ತಾಯಿ ಮೃತಪಡುವ ಅವಧಿಯಲ್ಲಿ 1 ನೇ ಪ್ರತಿವಾದಿಯ ಜೊತೆ ವಾಸ ಇದ್ದರು ಅಂದರೆ ಸರಿ. ದಾವಾ ಆಸ್ತಿ ನನ್ನ ತಾಯಿಗೆ ಅವರ ತಾಯಿಯ ಕಡೆಯಿಂದ ಬಂದಿದೆ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿ ನನ್ನ ತಾಯಿಗೆ ಹೇಗೆ ಬಂತು ಎಂದು ಬರೆಸಿಲ್ಲ ಅಂದರೆ ಸರಿಯಲ್ಲ. ನಿಮ್ಮ ತಂದೆ ತಾಯಿ ಸಹಿಯನ್ನು ನೋಡಿದ್ದೀರಾ ಎಂಬ ಸಲಹೆಗೆ ಸಾಕ್ಷಿಯು ತಂದೆ ಸಹಿಯನ್ನು ನೋಡಿದ್ದೇನೆ, ತಾಯಿ ಸಹಿಯನ್ನು ನೋಡಿಲ್ಲ ಎಂದು ಉತ್ತರಿಸಿದ್ದಾರೆ. ನನ್ನ ತಂದೆ ಪ್ರತಿವಾದಿ 3 ರವರು ಈಗ್ಗೆ ಎರಡು ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ನನ್ನ ತಂದೆಗೆ ಬೇರೆ ಆಸ್ತಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಮತ್ತು ಅವರ ಸಹೋದರರಿಗೆ ಹಾವೇರಿಯ ಸುಭಾಸ

ಸರ್ಕಲ್‌ನಲ್ಲಿ ಆಸ್ತಿ ಇದೆ ಅಂದರೆ ಸರಿ. ನನ್ನ ತಂದೆಯ ಆಸ್ತಿಯಲ್ಲಿ ಆಸ್ತಿ ಬೇಕು ಎಂದು ದಾವೆ ಸಲ್ಲಿಸಿಲ್ಲ ಅಂದರೆ ಸರಿ.

**15)** ನನ್ನ ತಾಯಿಯ ತಂದೆಯ ಹೆಸರು ಫಕ್ರುಸಾಬ ಟೇಲರ, ನನ್ನ ತಾಯಿಯ ತಾಯಿಯ ಹೆಸರು ಗೊತ್ತಿಲ್ಲ. ನನ್ನ ತಾಯಿಯ ತಂದೆ ಮೃತಪಟ್ಟ ನಂತರ ದಾವಾ ಆಸ್ತಿ ನನ್ನ ತಾಯಿಯ ಹೆಸರಿಗೆ ಬಂದಿದೆ ಅಂದರೆ ಸರಿ. ನನ್ನ ಮದುವೆ 1994 ರಲ್ಲಿ ಆಗಿದೆ, ಇತರೇ ವಾದಿಯರ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ನಾವೆಲ್ಲರೂ ನಮ್ಮ ನಮ್ಮ ಗಂಡನ ಮನೆಯಲ್ಲಿ ವಾಸ ಇದ್ದೇವೆ ಅಂದರೆ ಸರಿ.

**16)** 2 ನೇ ಪ್ರತಿವಾದಿಗೆ ಮದುವೆಯಾದಾಗಿನಿಂದ ಹೆಂಡತಿ ಮನೆ ಹುಬ್ಬಳ್ಳಿಯಲ್ಲಿ ವಾಸ ಇದ್ದಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಹಾವೇರಿಯಲ್ಲಿ ವಾಸ ಇದ್ದಾರೆ ಎಂದು ಉತ್ತರಿಸಿದ್ದಾರೆ. ಹುಬ್ಬಳ್ಳಿಯಿಂದ ಬಂದ ನಂತರ ಹಾವೇರಿಯ ಸುಭಾಷ ಸರ್ಕಲ್‌ನಲ್ಲಿ ವಾಸ ಇದ್ದಾರೆ ಎಂಬ ಸಲಹೆಗೆ ಸಾಕ್ಷಿಯು ಮೊದಲಿನಿಂದಲೂ ಹಾವೇರಿಯಲ್ಲಿ ವಾಸ ಇದ್ದಾರೆ ಎಂದು ಉತ್ತರಿಸಿದ್ದಾರೆ. ದಾವಾ ಆಸ್ತಿಯಲ್ಲಿ ನಿನ್ನ ತಾಯಿ ವ್ಯಾಪಾರ ಮಾಡುತ್ತಿದ್ದರು ಎಂಬ ಸಲಹೆಗೆ ಸಾಕ್ಷಿಯು ನನ್ನ ತಂದೆ ತಾಯಿ ಇಬ್ಬರೂ ಹಂಚಿನ ವ್ಯಾಪಾರ ಮಾಡುತ್ತಿದ್ದರು ಎಂದು ಉತ್ತರಿಸಿದ್ದಾರೆ. 1 ನೇ ಪ್ರತಿವಾದಿ ವ್ಯಾಪಾರಕ್ಕೆ ಸಹಾಯ ಮಾಡುತ್ತಿದ್ದರು ಅಂದರೆ ಸರಿ. ನನ್ನ ತಾಯಿ ಹಾವೇರಿಯ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದರು ಅಂದರೆ ಸರಿ.

**17)** ನನ್ನ ತಾಯಿ ಮೃತಪಡುವವರೆಗೂ 1 ನೇ ಪ್ರತಿವಾದಿಯೇ ನೋಡಿಕೊಂಡಿದ್ದ ಅಂದರೆ ಸರಿಯಲ್ಲ. ನನ್ನ ತಾಯಿ ಆಸ್ಪತ್ರೆಯಲ್ಲಿದ್ದಾಗ 1 ನೇ ಪ್ರತಿವಾದಿ ಆರೈಕೆ ಮಾಡುತ್ತಿದ್ದ ಎಂಬ ಸಲಹೆಗೆ ಸಾಕ್ಷಿಯು ಎಲ್ಲರೂ ಸೇರಿ ನಮ್ಮ ತಾಯಿಯ ಆರೈಕೆ ಮಾಡುತ್ತಿದ್ದೇವು ಎಂದು ಉತ್ತರಿಸಿದ್ದಾರೆ.

**ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಪ್ರಭಾರ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ, ಹಾವೇರಿ.**